IslamHouse.com

# ಏಕೈಕ ಸಂದೇಶ

رسالة واحدة فقط

[ Kannada – ಕನ್ನಡ – الكنادي ]

ಡಾ। ನಾಜಿ ಇಬ್ನ್ ಇಬ್ರಾಹೀಂ ಅಲ್‌ಅರ್ಫಜ್

ಅನುವಾದ: ಮುಹಮ್ಮದ್ ಹಂಝ ಪುತ್ತೂರು

ಪರಿಶೀಲನೆ: ಹಸೈನಾರ್ ಸ್ವಲಾಹಿ

IslamHouse.com

# رسالة واحدة فقط

د. ناجي بن إبراهيم العرفج

ترجمة: محمد حمزة البتوري

مراجعة: حسينار الصلاحي

# ಸಮರ್ಪಣೆ

- ನಿಷ್ಪಕ್ಷವಾಗಿ ಸತ್ಯವನ್ನು ಹುಡುಕುತ್ತಿರುವ ಸತ್ಯಾನ್ವೇಷಿಗಳಿಗೆ
- ಅಪಾರ ಬುದ್ಧಿಶಕ್ತಿಯುಳ್ಳ ತೀಕ್ಷ್ಣಮತಿಗಳಿಗೆ

# ಓದುವುದಕ್ಕೆ ಮುನ್ನ ಕೆಲವು ಪ್ರಶ್ನೆಗಳು:

1. ಈ ಏಕೈಕ ಸಂದೇಶದ ಉದ್ದೇಶವೇನು?
2. ಇದರ ಬಗ್ಗೆ ಬೈಬಲ್ ಏನೆನ್ನುತ್ತದೆ?
3. ಇದರ ಬಗ್ಗೆ ಕುರ್‌ಆನ್ ಏನೆನ್ನುತ್ತದೆ?
4. ಇದನ್ನು ಓದಿದ ಬಳಿಕ ನಿಮ್ಮ ಅಭಿಪ್ರಾಯವೇನು?

## ಸಂದೇಶದ ಹಿನ್ನೆಲೆ:

ಆದಮರನ್ನು ಸೃಷ್ಟಿಸಿದ ಬಳಿಕ, ಮೂಲಭೂತವಾದ ಈ ಏಕೈಕ ಸಂದೇಶವನ್ನು ಮಾನವರ ಕಡೆಗೆ ಒಯ್ಯಲಾಯಿತು. ಜನರಲ್ಲಿ ಈ ಸಂದೇಶದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಅವರನ್ನು ನೇರವಾದ ಮಾರ್ಗದ ಕಡೆಗೆ ಮರಳಿ ತರಲು ಏಕೈಕ ಸತ್ಯದೇವನು ಪ್ರವಾದಿಗಳನ್ನು ಮತ್ತು ಸಂದೇಶವಾಹಕರನ್ನು ಕಳುಹಿಸಿದನು. ಆದಮ್, ನೋಹ್, ಅಬ್ರಹಾಂ, ಮೋಶೆ, ಯೇಸು ಮತ್ತು ಮುಹಮ್ಮದ್ (ಅವರೆಲ್ಲರ ಮೇಲೂ ಶಾಂತಿಯಿರಲಿ) ಅವರಲ್ಲಿ ಕೆಲವರು. ಈ ಎಲ್ಲಾ ಪ್ರವಾದಿಗಳು ಮತ್ತು ಸಂದೇಶವಾಹಕರು ಏಕೈಕ ಸಂದೇಶವನ್ನು ಹೊತ್ತು ತಂದಿದ್ದರು.

ಆ ಸಂದೇಶವು:

**ಸತ್ಯದೇವನು ಒಬ್ಬನೇ, ಅವನನ್ನು ಮಾತ್ರ ಆರಾಧಿಸಬೇಕು.**

**ಆ ಏಕೈಕ ಸತ್ಯದೇವನೇ ಸೃಷ್ಟಿಕರ್ತನು. ಅವನು ಮಾತ್ರ ಆರಾಧನೆಗೆ ಅರ್ಹನು.**

ದೇವನು ಏಕೈಕನು; ಅವನನ್ನು ಮಾತ್ರ ಆರಾಧಿಸಬೇಕು ಎಂಬ ಸಂದೇಶವನ್ನು ತಲುಪಿಸುವುದಕ್ಕಾಗಿ ಅವನು ಪ್ರವಾದಿ ನೋಹರನ್ನು (ಅವರ ಮೇಲೆ ಶಾಂತಿಯಿರಲಿ) ಕಳುಹಿಸಿದನು.

ದೇವನು ಏಕೈಕನು; ಅವನನ್ನು ಮಾತ್ರ ಆರಾಧಿಸಬೇಕು ಎಂಬ ಸಂದೇಶವನ್ನು ತಲುಪಿಸುವುದಕ್ಕಾಗಿ ಅವನು ಪ್ರವಾದಿ ಅಬ್ರಹಾಮರನ್ನು (ಅವರ ಮೇಲೆ ಶಾಂತಿಯಿರಲಿ) ಕಳುಹಿಸಿದನು.

ಅವನು ಪ್ರವಾದಿ ಮೋಶೆಯನ್ನು (ಅವರ ಮೇಲೆ ಶಾಂತಿಯಿರಲಿ) ಕಳುಹಿಸಿದ್ದು ದೇವನು ಏಕೈಕನು; ಅವನನ್ನು ಮಾತ್ರ ಆರಾಧಿಸಬೇಕು ಎಂಬ ಸಂದೇಶವನ್ನು ತಲುಪಿಸುವುದಕ್ಕಾಗಿ.

ದೇವನು ಏಕೈಕನು; ಅವನನ್ನು ಮಾತ್ರ ಆರಾಧಿಸಬೇಕು ಎಂಬ ಸಂದೇಶವನ್ನು ತಲುಪಿಸುವುದಕ್ಕಾಗಿ ಅವನು ಪ್ರವಾದಿ ಯೇಸುವನ್ನು (ಅವರ ಮೇಲೆ ಶಾಂತಿಯಿರಲಿ) ಕಳುಹಿಸಿದನು.

ದೇವನು ಏಕೈಕನು; ಅವನನ್ನು ಮಾತ್ರ ಆರಾಧಿಸಬೇಕು ಎಂಬ ಸಂದೇಶವನ್ನು ತಲುಪಿಸುವುದಕ್ಕಾಗಿ ಅವನು ಪ್ರವಾದಿ ಮುಹಮ್ಮದ್‌ರನ್ನು (ಅವರ ಮೇಲೆ ಶಾಂತಿಯಿರಲಿ) ಕಳುಹಿಸಿದನು.

ಪ್ರವಾದಿಗಳ ಪೈಕಿ ಹೆಚ್ಚು ದೃಢಚಿತ್ತರಾಗಿದ್ದ ಮೇಲೆ ಹೆಸರಿಸಿದ ಐವರು ಪ್ರವಾದಿಗಳನ್ನು ಮಾತ್ರವಲ್ಲದೆ, ನಮಗೆ ಗೊತ್ತಿರುವ ಮತ್ತು ಗೊತ್ತಿಲ್ಲದ ಅಸಂಖ್ಯ ಪ್ರವಾದಿಗಳನ್ನು ಮತ್ತು ಸಂದೇಶವಾಹಕರನ್ನು ಹಲವು

ದೌತ್ಯಗಳೊಂದಿಗೆ ಸತ್ಯದೇವನಾದ ಅಲ್ಲಾಹು ಕಳುಹಿಸಿದ್ದಾನೆ. ಆ ದೌತ್ಯಗಳ ಪೈಕಿ ಪ್ರಮುಖವಾದವು ಹೀಗಿವೆ:

1. ದೈವಿಕ ಸಂದೇಶಗಳನ್ನು ಸ್ವೀಕರಿಸಿ ಅವುಗಳನ್ನು ತಮ್ಮ ಜನತೆಗೆ ಮತ್ತು ಅನುಯಾಯಿಗಳಿಗೆ ತಲುಪಿಸುವುದು.

2. ಜನರಿಗೆ ಏಕದೇವವಿಶ್ವಾಸವನ್ನು ಮತ್ತು ಆರಾಧನೆಯಲ್ಲಿ ನಿಷ್ಕಳಂಕತೆ ಪಾಲಿಸುವುದನ್ನು ಕಲಿಸುವುದು.

3. ಮಾತಿನಲ್ಲೂ, ಕ್ರಿಯೆಯಲ್ಲೂ ಅತ್ಯುತ್ತಮ ಮಾದರಿಯನ್ನು ತೋರಿಸುವುದು. ಜನರು ಆ ಮಾದರಿಯನ್ನು ಹಿಂಬಾಲಿಸಿ ದೇವನಿಗೆ ಹತ್ತಿರವಾಗುವುದಕ್ಕಾಗಿ.

4. ದೇವನನ್ನು ಭಯಪಡಲು ಮತ್ತು ಅವನ ಆಜ್ಞಾಪಾಲನೆ ಮಾಡಲು ಜನರಿಗೆ ಬೋಧಿಸುವುದು.

5. ಅನುಯಾಯಿಗಳಿಗೆ ಧರ್ಮದ ನಿಯಮಗಳನ್ನು ಮತ್ತು ಅತ್ಯುತ್ತಮ ಸ್ವಭಾವಗುಣಗಳನ್ನು ಕಲಿಸಿಕೊಡುವುದು.

6. ಅಧರ್ಮಿಗಳಿಗೆ ಮತ್ತು ವಿಗ್ರಹಾರಾಧನೆ ಮಾಡುವ ಬಹುದೇವ ವಿಶ್ವಾಸಿಗಳಿಗೆ ಸನ್ಮಾರ್ಗವನ್ನು ತೋರಿಸಿಕೊಡುವುದು.

7. ಮರಣಾನಂತರ ಜನರನ್ನು ಪುನರ್ಜೀವಗೊಳಿಸಲಾಗುವುದು ಮತ್ತು ಅವರ ಕರ್ಮಗಳ ಬಗ್ಗೆ ವಿಚಾರಣೆ ಮಾಡಲಾಗುವುದು ಎಂದು ಜನರಿಗೆ ತಿಳಿಸಿಕೊಡುವುದು. ಯಾರು ಏಕೈಕ ಸತ್ಯದೇವನಲ್ಲಿ (ಅಲ್ಲಾಹನಲ್ಲಿ) ವಿಶ್ವಾಸವಿಟ್ಟು ಸತ್ಕಾರ್ಯ ಮಾಡುತ್ತಾನೋ ಅವನಿಗೆ ಸ್ವರ್ಗವಿದೆ; ಯಾರು ಅವನೊಡನೆ ಸಹಭಾಗಿಗಳನ್ನು ನಿಶ್ಚಯಿಸಿ

ಅವನ ಆಜ್ಞೆಗಳನ್ನು ಧಿಕ್ಕರಿಸುತ್ತಾನೋ ಅವನಿಗೆ ನರಕವಿದೆ ಎಂದು ತಿಳಿಸಿಕೊಡುವುದು.

ಪ್ರವಾದಿಗಳನ್ನು ಮತ್ತು ಸಂದೇಶವಾಹಕರನ್ನು ಸೃಷ್ಟಿಸಿದವನು ಮತ್ತು ಅವರನ್ನು ಜನರ ಕಡೆಗೆ ಕಳುಹಿಸಿದವನು ಒಬ್ಬನೇ ದೇವನು. ಜಗತ್ತಿನಲ್ಲಿರುವ ಸರ್ವ ವಸ್ತುಗಳೂ ಒಬ್ಬ ದೇವನ ಅಸ್ತಿತ್ವವನ್ನು ಕೂಗಿ ಹೇಳುತ್ತವೆ. ಅವನು ಏಕೈಕನೆಂಬುದಕ್ಕೆ ಸಾಕ್ಷಿ ವಹಿಸುತ್ತವೆ. ಆ ಏಕೈಕ ಸತ್ಯದೇವನಾದ ಅಲ್ಲಾಹು ಪ್ರಪಂಚದ ಸೃಷ್ಟಿಕರ್ತ. ಪ್ರಪಂಚದಲ್ಲಿರುವ ಮನುಷ್ಯರು, ಪ್ರಾಣಿಗಳು, ಕ್ರಿಮಿಕೀಟಗಳೆಲ್ಲವನ್ನೂ ಸೃಷ್ಟಿಸಿದ್ದು ಅವನೇ. ಮರಣವನ್ನು, ತಾತ್ಕಾಲಿಕ ಬದುಕನ್ನು ಮತ್ತು ಶಾಶ್ವತ ಬದುಕನ್ನು ಎಲ್ಲವನ್ನೂ ಸೃಷ್ಟಿಸಿದ್ದು ಅವನೇ.

ಯಹೂದಿಗಳು, ಕ್ರೈಸ್ತರು ಮತ್ತು ಮುಸ್ಲಿಮರ ಕೈಯಲ್ಲಿರುವ ಪವಿತ್ರ ಗ್ರಂಥಗಳು ಅಲ್ಲಾಹನ ಅಸ್ತಿತ್ವಕ್ಕೆ ಮತ್ತು ಏಕತೆಗೆ ಸಾಕ್ಷಿ ಹೇಳುತ್ತವೆ.

ಬೈಬಲ್ ಮತ್ತು ಕುರ್‌ಆನಿನಲ್ಲಿರುವ ದೇವ ಪರಿಕಲ್ಪನೆಯನ್ನು ವಸ್ತುನಿಷ್ಠವಾಗಿ ಮತ್ತು ಪಕ್ಷಪಾತರಹಿತವಾಗಿ ಅಧ್ಯಯನ ಮಾಡುವ ಸತ್ಯಾನ್ವೇಷಿಗೆ ಏಕೈಕ ಸತ್ಯದೇವನಾದ ಅಲ್ಲಾಹನಿಗೆ ಮಾತ್ರ ಸೀಮಿತವಾಗಿರುವ, ಅವನ ಹೊರತು ಇತರ ಯಾರಿಗೂ ಇಲ್ಲದಿರುವ ವಿಶೇಷ ಗುಣಗಳನ್ನು ಬೇರ್ಪಡಿಸಿ ತಿಳಿಯಲು ಸಾಧ್ಯ. ಆ ಗುಣಗಳಲ್ಲಿ ಕೆಲವು ಹೀಗಿವೆ:

1. ಅಲ್ಲಾಹು ಸೃಷ್ಟಿಸುವವನು. ಅವನು ಸೃಷ್ಟಿಸಲ್ಪಟ್ಟವನಲ್ಲ.

2. ಅಲ್ಲಾಹು ಏಕೈಕನು. ಅವನಿಗೆ ಯಾವುದೇ ಸಹಭಾಗಿಗಳಿಲ್ಲ. ಒಂದಕ್ಕಿಂತ ಹೆಚ್ಚು ಅಲ್ಲಾಹು ಇಲ್ಲ. ಅವನಿಗೆ ತಂದೆಯೋ ಮಕ್ಕಳೋ ಇಲ್ಲ.

3. ಸೃಷ್ಟಿಗಳ ಯಾವುದೇ ಕಲ್ಪನೆಗೂ ಅವನು ನಿಲುಕುವುದಿಲ್ಲ. ಇಹಲೋಕದಲ್ಲಿ ಅವನನ್ನು ನೋಡಲು ಯಾರಿಗೂ ಸಾಧ್ಯವಿಲ್ಲ.

4. ಅಲ್ಲಾಹು ಅನಾದಿ. ಅವನಿಗೆ ಮರಣವಿಲ್ಲ. ಅವನು ಅವತಾರವೆತ್ತುವುದಿಲ್ಲ. ಅವನು ಸೃಷ್ಟಿಗಳ ರೂಪವನ್ನು ತಾಳುವುದಿಲ್ಲ.

5. ಅವನು ನಿರಪೇಕ್ಷ. ಅವನು ತನ್ನ ಅಸ್ತಿತ್ವದಿಂದಲೇ ನೆಲೆನಿಲ್ಲುತ್ತಾನೆ. ಅವನಿಗೆ ಯಾರ ಆವಶ್ಯಕತೆಯೂ ಇಲ್ಲ. ಯಾರ ಸಹಾಯವೂ ಬೇಕಾಗಿಲ್ಲ. ಅವನಿಗೆ ತಂದೆಯೋ ತಾಯಿಯೋ ಇಲ್ಲ. ಪತ್ನಿಯೋ ಮಕ್ಕಳೋ ಇಲ್ಲ. ಅವನಿಗೆ ಆಹಾರ ಪಾನೀಯದ ಅಗತ್ಯವಿಲ್ಲ. ಆದರೆ ಸರ್ವ ಸೃಷ್ಟಿಗಳಿಗೂ ಅಲ್ಲಾಹನ ಆಶ್ರಯದ ಅಗತ್ಯವಿದೆ.

6. ಸಾರ್ವಭೌಮತೆ, ಸಂಪೂರ್ಣತೆ, ಸೌಂದರ್ಯ, ಮೊದಲಾದ ಗುಣವಿಶೇಷಣಗಳು ಅಲ್ಲಾಹನಿಗೆ ಮಾತ್ರ ಇರುವಂತದ್ದು. ಅವನಿಗೆ ಹೋಲಿಕೆಯಾಗಿ ಯಾರೂ ಇಲ್ಲ. ಅವನಂತೆ ಯಾರೂ ಇಲ್ಲ.

ಈ ಮಾನದಂಡಗಳನ್ನು ಮತ್ತು ಗುಣವಿಶೇಷಣಗಳನ್ನು (ಹಾಗೂ ಅಲ್ಲಾಹನಿಗೆ ಮಾತ್ರ ಸೀಮಿತವಾಗಿರುವ ಇತರ ಗುಣವಿಶೇಷಣಗಳನ್ನು) ಬಳಸಿ ಏಕೈಕ ಸತ್ಯದೇವನನ್ನು ಬೇರ್ಪಡಿಸಿ ತಿಳಿಯಲು ಮತ್ತು ಮಿಥ್ಯದೇವರುಗಳನ್ನು ಹಾಗೂ ಸ್ವಯಂಘೋಷಿತ ಆರಾಧ್ಯರುಗಳನ್ನು ಅಲ್ಲಗಳೆಯಲು ಸಾಧ್ಯವಿದೆ.

ಮೇಲೆ ಹೇಳಿದ ಆ ಏಕೈಕ ಸಂದೇಶದ ಕಡೆಗೆ ನಾವು ಮರಳಿ ಬರೋಣ. ಬೈಬಲ್ ಮತ್ತು ಕುರ್‌ಆನಿನಲ್ಲಿ ಅಲ್ಲಾಹನ ಏಕೈಕತೆಯನ್ನು ದೃಢೀಕರಿಸುವ ವಚನಗಳ ಬಗ್ಗೆ ಗಮನಹರಿಸೋಣ. ಅದಕ್ಕಿಂತ ಮುಂಚೆ ಒಂದು ವಿಚಾರವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ಅದೇನೆಂದರೆ:

ಕೆಲವು ಕ್ರೈಸ್ತರು ಅಚ್ಚರಿಯೊಂದಿಗೆ ಕೇಳುವರು: ಅಲ್ಲಾಹು ಒಬ್ಬನು ಎಂದು ವಿವರಿಸುವುದರ ಅಗತ್ಯವೇನಿದೆ? ನಾವು ಏಕೈಕ ಸತ್ಯದೇವನಲ್ಲಿ ವಿಶ್ವಾಸವಿಡುತ್ತೇವೆ. ಇಲ್ಲಿ ಅದು ಸಮಸ್ಯೆಯಲ್ಲ.

ಸತ್ಯವೇನೆಂದರೆ, ಕ್ರೈಸ್ತ ಧರ್ಮದ ಬಗ್ಗೆ ನಾನು ನಡೆಸಿದ ದೀರ್ಘ ಅಧ್ಯಯನದಿಂದ, ಕ್ರೈಸ್ತರೊಂದಿಗೆ ನಾನು ನಡೆಸಿದ ಸಂವಾದಗಳಿಂದ ನಾನು ಕಂಡುಕೊಂಡ ಪ್ರಕಾರ ಕ್ರೈಸ್ತರಿಗೆ ಸಂಬಂಧಿಸಿದಂತೆ (ಅವರಲ್ಲಿ ಕೆಲವರ ಪರಿಕಲ್ಪನೆಯಂತೆ) ಏಕೈಕ ಸತ್ಯದೇವ ಈ ಕೆಳಗೆ ಹೇಳುವ ವಿಷಯಗಳನ್ನು ಒಳಗೊಳ್ಳುತ್ತಾನೆ:

1. ಸತ್ಯದೇವನಾದ ತಂದೆ
2. ಸತ್ಯದೇವನಾದ ಮಗ
3. ಸತ್ಯದೇವನಾದ ಪವಿತ್ರಾತ್ಮ

ಕನಿಷ್ಠ ಸಾಮಾನ್ಯ ಜ್ಞಾನವಿರುವ ಮತ್ತು ಸ್ವಲ್ಪವಾದರೂ ವೈಚಾರಿಕತೆಯಿರುವ ಒಬ್ಬ ನಿಷ್ಪಕ್ಷ ವ್ಯಕ್ತಿ ಕ್ರೈಸ್ತರೊಂದಿಗೆ ಈ ಪ್ರಶ್ನೆಗಳನ್ನು ಕೇಳುವನು:

- ನೀವು ಮೂರು ದೇವರುಗಳನ್ನು ನಂಬುತ್ತಿರುವಾಗ ನಿಮ್ಮ ಪ್ರಕಾರ ಏಕೈಕ ಸತ್ಯದೇವ ಎಂಬುದರ ಅರ್ಥವೇನು?

- ಆ ಏಕೈಕ ಸತ್ಯದೇವನು ಮೂವರಲ್ಲಿ ಅವತಾರ ಹೊಂದಿದನೋ ಅಥವಾ ಆ ಮೂವರು ದೇವರುಗಳು ಒಬ್ಬ ಸತ್ಯದೇವರಲ್ಲಿ ಅವತಾರ ಹೊಂದಿದರೋ (ಮೂರರಲ್ಲಿ ಒಂದೋ ಅಥವಾ ಒಂದರಲ್ಲಿ ಮೂರೋ)?

ಮಾತ್ರವಲ್ಲ, ಕೆಲವು ಕ್ರೈಸ್ತರ ನಂಬಿಕೆ ಪ್ರಕಾರ ಈ ಮೂರು ದೇವರುಗಳಿಗೂ ಬೇರೆ ಬೇರೆ ಕೆಲಸಗಳಿವೆ:

1. ಸತ್ಯದೇವನಾದ ತಂದೆ = ಸೃಷ್ಟಿ ಮಾಡುತ್ತಾನೆ
2. ಸತ್ಯದೇವನಾದ ಮಗ = ಮೋಕ್ಷ ನೀಡುತ್ತಾನೆ
3. ಸತ್ಯದೇವನಾದ ಪವಿತ್ರಾತ್ಮ = ಬೆಂಬಲ ನೀಡುತ್ತಾನೆ

ಯೇಸುಕ್ರಿಸ್ತರು ದೇವಪುತ್ರ ಅಥವಾ ಸ್ವತಃ ದೇವ ಅಥವಾ ದೇವನ ಒಂದು ಭಾಗ ಎಂಬ ವಾದವು ತೋರಾ ಮತ್ತು ಬೈಬಲ್‌ನ ಸೂಕ್ತಿಗಳಿಗೆ ತದ್ವಿರುದ್ಧವಾಗಿದೆ. ಬೈಬಲ್ ಹೇಳುವ ಪ್ರಕಾರ ದೇವನನ್ನು ಇಹಲೋಕದಲ್ಲಿ ಯಾರಿಗೂ ನೋಡಲು ಸಾಧ್ಯವಿಲ್ಲ.

"ಆದರೆ ನೀವು ಆತನ ಧ್ವನಿಯನ್ನು ಎಂದೂ ಕೇಳಿಲ್ಲ. ಆತನು ಹೇಗಿದ್ದಾನೆ ಎಂಬುದನ್ನು ನೀವು ಎಂದೂ ಕಂಡಿಲ್ಲ." [ಯೋಹಾನ 5:37]

"ಆತನನ್ನು ಇದುವರೆಗೆ ಯಾರೂ ನೋಡಿಲ್ಲ. ನೋಡಲು ಸಾಧ್ಯವೂ ಇಲ್ಲ." [1 ತಿಮೊಥೆಯನಿಗೆ 6:16]

"ನನ್ನನ್ನು ಯಾರೂ ಮುಖಾಮುಖಿಯಾಗಿ ಕಾಣಲು ಸಾಧ್ಯವಿಲ್ಲ. ನನ್ನನ್ನು ನೋಡಿದ ಯಾವನೂ ಬದುಕಲಾರನು." [ವಿಮೋಚನಕಾಂಡ 33:20]

ಮೇಲಿನ ಸೂಕ್ತಿಗಳನ್ನು ಮತ್ತು ಅದರಂತಿರುವ ಇತರ ಸೂಕ್ತಿಗಳನ್ನು ಓದುವಾಗ, ನನ್ನಲ್ಲಿ ಉದ್ಭವಿಸುವ ನಿಷ್ಪಕ್ಷ ಮತ್ತು ಪ್ರಾಮಾಣಿಕ ಪ್ರಶ್ನೆಯೇನೆಂದರೆ, ಯೇಸುಕ್ರಿಸ್ತರೇ ದೇವರು ಎಂಬ ಕ್ರೈಸ್ತ ನಂಬಿಕೆ ಮತ್ತು ದೇವರನ್ನು ನೋಡಲು ಯಾರಿಗೂ ಸಾಧ್ಯವಿಲ್ಲ, ಅವನ ಧ್ವನಿಯನ್ನು ಕೇಳಲು ಯಾರಿಗೂ ಸಾಧ್ಯವಿಲ್ಲ ಎಂಬ ಬೈಬಲ್ ಉಕ್ತಿಗಳು ಪರಸ್ಪರ

ವಿರೋಧಾಭಾಸ ಸೂಚಿಸುವುದಿಲ್ಲವೇ? ಇವೆರಡನ್ನು ಹೊಂದಾಣಿಕೆ ಮಾಡುವುದು ಹೇಗೆ?

- ಅಂದಿನ ಕಾಲದ ಯಹೂದರು ಮತ್ತು ಯೇಸುಕ್ರಿಸ್ತರ ಕುಟುಂಬ ಯೇಸುಕ್ರಿಸ್ತರನ್ನು (ಅವರ ನಂಬಿಕೆ ಪ್ರಕಾರ ಮಗನಾಗಿರುವ ದೇವರನ್ನು) ಕಣ್ಣಾರೆ ನೋಡಿಲ್ಲವೇ? ಅವರ ಧ್ವನಿಯನ್ನು ಕಿವಿಯಾರೆ ಕೇಳಿಲ್ಲವೇ?

- ದೇವನನ್ನು ಕಾಣಲು ಅಥವಾ ನೋಡಲು ಯಾರಿಗೂ ಸಾಧ್ಯವಿಲ್ಲ ಎಂದು ಬೈಬಲ್ ಹಳೆಯ ಮತ್ತು ಹೊಸ ಒಡಂಬಡಿಕೆಗಳು ಜಂಟಿಯಾಗಿ ದೃಢೀಕರಿಸಿರುವಾಗ, ಯೇಸುಕ್ರಿಸ್ತರು ದೇವರು ಅಥವಾ ದೇವಪುತ್ರರಾಗುವುದು ಹೇಗೆ? ಏಕೈಕ ಸತ್ಯದೇವನಿಗೆ ಸಂಬಂಧಿಸಿದಂತೆ ಏನಾದರೂ ಗುಪ್ತ ವಿಚಾರಗಳು ಅಡಗಿಕೊಂಡಿವೆಯೇ?

ಆದರೆ ಗುಪ್ತ ವಿಚಾರವನ್ನು ಬೈಬಲ್ ನಿರಾಕರಿಸುತ್ತದೆ. ಬೈಬಲ್‌ನಲ್ಲಿ ಏಕೈಕ ಸತ್ಯದೇವನು ಹೇಳುತ್ತಾನೆ:

"ನಾನೇ ಯಹೋವನು. ನನ್ನ ಹೊರತು ಬೇರೆ ದೇವರುಗಳಿಲ್ಲ. ನಾನು ಗುಪ್ತವಾಗಿ ಮಾತನಾಡದೆ ಬಹಿರಂಗವಾಗಿಯೇ ಮಾತನಾಡಿ ದ್ದೇನೆ. ಈ ಭೂಮಿಯು ಕತ್ತಲೆಯ ಸ್ಥಳದಲ್ಲಿ ನನ್ನ ಮಾತುಗಳನ್ನು ಅಡಗಿಸಿಡಲಿಲ್ಲ. ನನ್ನನ್ನು ಕಂಡುಹಿಡಿಯಲು ಗುಪ್ತಸ್ಥಳದಲ್ಲಿ ಹುಡುಕಿರಿ ಎಂದು ನಾನು ಯಾಕೋಬನ ಜನರಿಗೆ ಹೇಳಲಿಲ್ಲ. ನಾನೇ ಯಹೋವನು. ನಾನು ಸತ್ಯವನ್ನೇ ಆಡುವೆನು." [ಯೆಶಾಯ 46:19]

### ಹಾಗಾದರೆ ಸತ್ಯವೇನು?

ದಯವಿಟ್ಟು ಮೇಲಿನ ಸೂಕ್ತಿಗಳನ್ನು ಪುನಃ ಪುನಃ ಓದಿರಿ. ಸ್ವಲ್ಪ ಹೊತ್ತು ಶಾಂತವಾಗಿ ಚಿಂತಿಸಿರಿ.

ನಾವೀಗ ಬೈಬಲ್ ಮತ್ತು ಕುರ್‌ಆನ್‌ನಲ್ಲಿ ಏಕೈಕ ಸತ್ಯದೇವನ ನಿಜಸ್ಥಿತಿಯ ಬಗ್ಗೆ ಏನು ಹೇಳಲಾಗಿದೆ ಎಂಬುದನ್ನು ನೋಡೋಣ. ನಾವಿಲ್ಲಿ ಉಲ್ಲೇಖಿಸುವ ಬೈಬಲ್ ಮತ್ತು ಕುರ್‌ಆನ್ ಸೂಕ್ತಿಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ, ಈ ಪುಸ್ತಕವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಓದಿ ನಿಮ್ಮ ಅಭಿಪ್ರಾಯಗಳನ್ನು ನನಗೆ ತಿಳಿಸಬೇಕೆಂದು ವಿನಂತಿಸುತ್ತೇನೆ.

ನಾನಿಲ್ಲಿ ಯಾವುದೇ ಟಿಪ್ಪಣಿಯಿಲ್ಲದೆ ನೇರವಾಗಿ ಸೂಕ್ತಿಗಳನ್ನು ಉಲ್ಲೇಖಿಸುತ್ತಿದ್ದೇನೆ. ಆ ಸೂಕ್ತಿಗಳನ್ನು ನೀವು ಯಾವುದೇ ಪೂರ್ವಕಲ್ಪನೆಗಳೋ, ಪೂರ್ವಗ್ರಹಗಳೋ ಇಲ್ಲದೆ, ವಸ್ತುನಿಷ್ಠವಾಗಿ ಅಧ್ಯಯನ ಮಾಡಬೇಕೆಂದು ವಿನಂತಿಸುತ್ತೇನೆ.

## ಏಕೈಕ ಸತ್ಯದೇವ ಬೈಬಲ್ ಹಳೆಯ ಒಡಂಬಡಿಕೆಯಲ್ಲಿ:

- “ಇಸ್ರೇಲಿನ ಜನರೇ, ಕಿವಿಗೊಡಿರಿ. ಯಹೋವನೇ ನಮ್ಮ ದೇವರು. ದೇವರು ಒಬ್ಬನೇ.” [ಧರ್ಮೋಪದೇಶಕಾಂಡ 6:4]

- “ನಾನೇ ನಿಜವಾದ ದೇವರು. ನನಗಿಂತ ಮೊದಲು ಯಾರೂ ಇರಲಿಲ್ಲ. ಇನ್ನು ಮುಂದೆಯೂ ನನ್ನ ಹೊರತು ಯಾವ ದೇವರೂ ಇರುವುದಿಲ್ಲ. ನಾನೇ ದೇವರಾದ ಯಹೋವನು. ನನ್ನ ಹೊರತು ಬೇರೆ ರಕ್ಷಕನಿಲ್ಲ.” [ಯೆಶಾಯ 43:10–11]

- ನಾನೊಬ್ಬನೇ ದೇವರು. ನನ್ನ ಹೊರತು ಬೇರೆ ದೇವರುಗಳಿಲ್ಲ. ನಾನೇ ಆದಿಯೂ ಅಂತ್ಯವೂ ಆಗಿದ್ದೇನೆ. ನನ್ನಂತಹ ಬೇರೆ ದೇವರುಗಳಿಲ್ಲ." [ಯೆಶಾಯ 44:6]

- "ನಾನೊಬ್ಬನೇ ದೇವರು. ನನ್ನಂಥ ದೇವರು ಬೇರೆ ಇದ್ದಾರೆಯೇ? ಕರುಣೆಯುಳ್ಳ ದೇವರು ಬೇರೆಲ್ಲಾರೂ ಇರುವನೇ? ತನ್ನ ಜನರನ್ನು ವಿಮೋಚಿಸುವಂತಹ ಬೇರೆ ದೇವರು ಇರುವನೇ? ಇಲ್ಲ. ಬೇರೆ ದೇವರು ಇಲ್ಲ." [ಯೆಶಾಯ 45:21]

ಇಂತಹ ಬೇರೆ ಸೂಕ್ತಿಗಳು ಬೈಬಲ್‌ನಲ್ಲಿ ಇರುವುದು ನಿಮಗೆ ನೆನಪಿದೆಯೇ?

## ಏಕೈಕ ಸತ್ಯದೇವ ಬೈಬಲ್ ಹೊಸ ಒಡಂಬಡಿಕೆಯಲ್ಲಿ:

- "ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನು ಮತ್ತು ನೀನು ಕಳುಹಿಸಿದ ಯೇಸುಕ್ರಿಸ್ತರನ್ನು ತಿಳಿದುಕೊಳ್ಳುವುದೇ ನಿತ್ಯಜೀವ." [ಯೋಹಾನ 17:3]

- "ನಿನ್ನ ದೇವರಾದ ಪ್ರಭುವನ್ನೇ ಆರಾಧಿಸಬೇಕು. ಆತನೊಬ್ಬನನ್ನೇ ಸೇವಿಸಬೇಕು." [ಮತ್ತಾಯ 4:10]

- "ಇಸ್ರೇಲಿನ ಜನರೇ ಕೇಳಿರಿ. ನಮ್ಮ ದೇವರಾದ ಪ್ರಭುವೊಬ್ಬನೇ ದೇವರು... ಆತನಲ್ಲದೆ ಬೇರೆ ದೇವರಿಲ್ಲ." [ಮಾರ್ಕ 12:28–33]

- “ದೇವರು ಒಬ್ಬನೇ. ದೇವರಿಗೂ ಮನುಷ್ಯರಿಗೂ ಮಧ್ಯಸ್ಥನೂ ಒಬ್ಬನೇ. ಮನುಷ್ಯನಾಗಿರುವ ಯೇಸುಕ್ರಿಸ್ತನೇ ಆತನು.” [1 ತಿಮೊಥೆಯನಿಗೆ 2:5]

- “ಒಬ್ಬನು ಯೇಸುವಿನ ಬಳಿಗೆ ಬಂದು, ಬೋಧಕನೇ ನಾನು ನಿತ್ಯಜೀವ ಹೊಂದಲು ಯಾವ ಒಳ್ಳೆಯ ಕಾರ್ಯವನ್ನು ಮಾಡಬೇಕು ಎಂದು ಕೇಳಿದನು. ಯೇಸು, ಒಳ್ಳೆಯದನ್ನು ಕುರಿತು ನೀನು ನನ್ನನ್ನು ಕೇಳುವುದೇಕೆ? ದೇವರೊಬ್ಬನೇ ಒಳ್ಳೆಯವನು.” [ಮತ್ತಾಯ 19:16–17]

ದೇವರು ಒಬ್ಬನೇ (ಮೂವರಲ್ಲ) ಎಂಬುದನ್ನು ದೃಢೀಕರಿಸುವ ಬೇರೆ ಸೂಕ್ತಿಗಳನ್ನು ಉಲ್ಲೇಖಿಸಬಹುದೇ?

## ಏಕೈಕ ಸತ್ಯದೇವ ಕುರ್‌ಆನ್‌ನಲ್ಲಿ:

- “ಹೇಳಿರಿ: ಅವನು, ಅಲ್ಲಾಹು ಏಕೈಕನು. ಅಲ್ಲಾಹು ನಿರಪೇಕ್ಷನು. ಅವನು ಯಾರಿಗೂ ಜನ್ಮ ನೀಡಿಲ್ಲ. ಅವನು (ಯಾರ ಸಂತಾನವಾಗಿ) ಜನಿಸಿದವನೂ ಅಲ್ಲ. ಅವನಿಗೆ ಸರಿಸಾಟಿಯಾಗಿ ಯಾರೂ ಇಲ್ಲ.” [ಕುರ್‌ಆನ್ 112:1–4]

- “ನನ್ನ ಹೊರತು ಬೇರೆ ದೇವರುಗಳಿಲ್ಲ. ಆದುದರಿಂದ ನನ್ನನ್ನು ಮಾತ್ರ ಆರಾಧಿಸಿರಿ.” [ಕುರ್‌ಆನ್ 21:25]

- “ಅಲ್ಲಾಹು ಮೂವರಲ್ಲಿ ಒಬ್ಬನು ಎಂದು ಹೇಳಿದವರು ಖಂಡಿತವಾಗಿಯೂ ಅವಿಶ್ವಾಸಿಗಳಾದರು. ಒಬ್ಬನೇ ದೇವರಲ್ಲದೆ

ಬೇರೆ ದೇವರು ಇಲ್ಲ. ಅವರು ಹೇಳುತ್ತಿರುವ ಮಾತುಗಳನ್ನು ಅವರು ನಿಲ್ಲಿಸದಿದ್ದರೆ ಯಾತನಾಮಯ ಶಿಕ್ಷೆಯು ಅವರಲ್ಲಿರುವ ಅವಿಶ್ವಾಸಿಗಳನ್ನು ಹಿಡಿದುಕೊಳ್ಳುವುದು." [ಕುರ್‌ಆನ್ 5:73]

- "ಖಂಡಿತವಾಗಿಯೂ ನಿಮ್ಮ ದೇವರು ಏಕೈಕ ದೇವರು." [ಕುರ್‌ಆನ್ 37:4]

- "ಅಲ್ಲಾಹನ ಜೊತೆಗೆ ಬೇರೆ ದೇವರು ಇದ್ದಾರೋ? ಹೇಳಿರಿ: ನೀವು ಸತ್ಯವಂತರಾಗಿದ್ದರೆ ನಿಮ್ಮ ಪುರಾವೆಯನ್ನು ತನ್ನಿರಿ." [ಕುರ್‌ಆನ್ 27:64]

ಸತ್ಯವೇನೆಂದರೆ, ಈ ಸಂದೇಶವು (ದೇವನು ಏಕೈಕನು ಎಂಬ ಸಂದೇಶವು) ಕುರ್‌ಆನಿನ ಮೂಲ ತಿರುಳಾಗಿದೆ.

# ಸಮಾಪ್ತಿ

ಬೈಬಲ್ ಮತ್ತು ಕುರ್‌ಆನ್‌ನಲ್ಲಿರುವ ಇಂತಹ ನೂರಾರು ಪುರಾವೆಗಳು ಸತ್ಯದೇವನು ಏಕೈಕನು ಮತ್ತು ಅವನ ಹೊರತು ಬೇರೆ ದೇವರಿಲ್ಲ ಎಂಬುದನ್ನು ಸಂಶಯಾತೀತವಾಗಿ ದೃಢೀಕರಿಸುತ್ತದೆ. ಬೈಬಲ್ ಹೇಳುತ್ತದೆ: "ಇಸ್ರೇಲಿನ ಜನರೇ ಕೇಳಿರಿ. ನಮ್ಮ ದೇವರಾದ ಪ್ರಭುವೊಬ್ಬನೇ ದೇವರು... ಆತನಲ್ಲದೆ ಬೇರೆ ದೇವರಿಲ್ಲ." [ಮಾರ್ಕ 12:28–33] ಇದೇ ಸಂದೇಶವನ್ನು ಕುರ್‌ಆನ್ ಕೂಡ ಹೇಳುತ್ತದೆ: "ಹೇಳಿರಿ: ಅವನು, ಅಲ್ಲಾಹು ಏಕೈಕನು." [ಕುರ್‌ಆನ್ 112:1–4]

ದೇವನು ಏಕೈಕನು ಎಂದು ಮಾತ್ರವಲ್ಲ ಬೈಬಲ್ ಹೇಳುವುದು, ಬದಲಾಗಿ ಆ ದೇವನೇ ಸೃಷ್ಟಿಕರ್ತನು ಮತ್ತು ರಕ್ಷಕನೆಂದೂ ಹೇಳುತ್ತದೆ: "ನಾನೇ ನಿಜವಾದ ದೇವರು. ನನಗಿಂತ ಮೊದಲು ಯಾರೂ ಇರಲಿಲ್ಲ. ಇನ್ನು ಮುಂದೆಯೂ ನನ್ನ ಹೊರತು ಯಾವ ದೇವರೂ ಇರುವುದಿಲ್ಲ. ನಾನೇ ದೇವರಾದ ಯಹೋವನು. ನನ್ನ ಹೊರತು ಬೇರೆ ರಕ್ಷಕನಿಲ್ಲ." [ಯೆಶಾಯ 43:10–11]

ಇದರಿಂದ ತಿಳಿದುಬರುವ ಪ್ರಕಾರ ಯೇಸುಕ್ರಿಸ್ತರಿಗೆ ಅಥವಾ ಪವಿತ್ರಾತ್ಮರಿಗೆ ದೈವಿಕತೆಯಿದೆಯೆಂಬ ವಾದಕ್ಕೆ ಯಾವುದೇ ಬುನಾದಿಯಿಲ್ಲ. ಯಾವುದೇ ಪುರಾವೆಯೂ ಇಲ್ಲ. ಅವರಿಬ್ಬರೂ ಸತ್ಯದೇವನ ಸೃಷ್ಟಿಗಳು. ದೈವಿಕತೆಯೊಂದಿಗೆ ಅವರಿಗೆ ಯಾವುದೇ ಸಂಬಂಧವೂ ಇಲ್ಲ. ಅವರು ದೇವರುಗಳಲ್ಲ, ದೈವಿಕ ಪ್ರಕಟಣೆಗಳೋ, ದೈವಿಕ ಅವತಾರಗಳೋ ಅಲ್ಲ. ದೈವರೂಪಿಗಳೂ ಅಲ್ಲ. ಬೈಬಲ್ ಮತ್ತು ಕುರ್‌ಆನ್ ಸ್ಪಷ್ಟವಾಗಿ ಹೇಳಿದ ಪ್ರಕಾರ ದೇವರಂತೆ ಯಾರೂ ಇಲ್ಲ.

ಸತ್ಯದೇವನು ಯಹೂದರ ಬಗ್ಗೆ ಕುಪಿತನಾದನು. ಕಾರಣ ಅವರು ಪಥಭ್ರಷ್ಟರಾದರು ಮತ್ತು ಅವನ ಹೊರತು ಬೇರೆ ಆರಾಧ್ಯರನ್ನು ಆರಾಧಿಸಿದರು. "ಯಹೋವನು ಅವರ ಮೇಲೆ ಬಹಳವಾಗಿ ಕೋಪಗೊಂಡನು" [ಅರಣ್ಯಕಾಂಡ 25:3]. ಅವರು ನಿರ್ಮಿಸಿದ್ದ ಚಿನ್ನದ ಕರುವನ್ನು ಪ್ರವಾದಿ ಮೋಶೆ (ಅವರ ಮೇಲೆ ಶಾಂತಿಯಿರಲಿ) ನುಚ್ಚುನೂರು ಮಾಡಿದರು.

ಇನ್ನೊಂದು ಕಡೆ, ಯೇಸುಕ್ರಿಸ್ತರು ಬೋಧಿಸಿದ ಏಕದೇವವಿಶ್ವಾಸದಲ್ಲಿ ವಿಶ್ವಾಸವಿಟ್ಟ ಕಾರಣ ಮತ್ತು ಪೌಲನು ಕಲಿಸಿಕೊಟ್ಟ ತ್ರಿಯೇಕತ್ವವನ್ನು ವಿರೋಧಿಸಿದ ಕಾರಣ ಏಕದೇವವಿಶ್ವಾಸಿಗಳಾದ ಕ್ರೈಸ್ತರು ಕಠೋರ ಹಿಂಸೆಯನ್ನು ಸಹಿಸಿದರು.

ಒಟ್ಟಿನಲ್ಲಿ, ಜನರು ಏಕೈಕ ಸತ್ಯದೇವನಲ್ಲಿ ವಿಶ್ವಾಸವಿಡುವುದಕ್ಕೆ, ಅವನೊಂದಿಗೆ ಇತರ ಯಾರನ್ನೂ ಪಾಲುದಾರರನ್ನಾಗಿ ಮಾಡದೆ ಆರಾಧನೆಗಳನ್ನು ಅವನಿಗೆ ಮಾತ್ರ ಸಲ್ಲಿಸುವುದಕ್ಕೆ, ಏಕೈಕ ಸತ್ಯದೇವನಾದ ಅಲ್ಲಾಹು ಆದಮ್, ನೋಹ್, ಅಬ್ರಹಾಂ, ಮೋಶೆ, ಯೇಸು, ಮುಹಮ್ಮದ್ ಮುಂತಾದ ಸರ್ವ ಪ್ರವಾದಿಗಳನ್ನು ಮತ್ತು ಸಂದೇಶವಾಹಕರನ್ನು (ಅವರೆಲ್ಲರ ಮೇಲೆ ಶಾಂತಿಯಿರಲಿ) ಕಳುಹಿಸಿದನು. ಅವರೆಲ್ಲರೂ ತಂದ ಸಂದೇಶ ಏಕೈಕ ಸಂದೇಶವಾಗಿತ್ತು. ಅದು:

**ಸತ್ಯದೇವನು ಒಬ್ಬನೇ. ಅವನು ಮಾತ್ರ ಆರಾಧನೆಗೆ ಅರ್ಹನು.**

ಪ್ರವಾದಿಗಳ ಮತ್ತು ಸಂದೇಶವಾಹಕರ ಸಂದೇಶವು ಏಕೈಕ ಸಂದೇಶವಾಗಿರುವುದರಿಂದ ಅವರ ಧರ್ಮವೂ ಏಕೈಕ ಧರ್ಮವಾಗಿತ್ತು. ಹಾಗಾದರೆ ಪ್ರವಾದಿಗಳ ಮತ್ತು ಸಂದೇಶವಾಹಕರ ಧರ್ಮ ಯಾವುದು?

ಅವರೆಲ್ಲರ ಸಂದೇಶದ ತಿರುಳು ಏಕೈಕ ಸತ್ಯದೇವನಿಗೆ ಶರಣಾಗುವುದು. ಇಸ್ಲಾಂ ಎಂಬ ಶಬ್ದದ ಅರ್ಥವೇ "ಶರಣಾಗತಿ" ಎಂದು.

ಇಸ್ಲಾಂ ಧರ್ಮವು ಸತ್ಯಧರ್ಮವಾಗಿದೆ ಮತ್ತು ಎಲ್ಲ ಪ್ರವಾದಿಗಳ ಧರ್ಮವಾಗಿದೆಯೆಂದು ಕುರ್‌ಆನ್ ಹೇಳುತ್ತದೆ. ಈ ವಿಚಾರವನ್ನು ಬೈಬಲ್‌ನಲ್ಲಿಯೂ ಕಾಣಬಹುದು. (ಇದರ ಬಗ್ಗೆ ನಾನು ಶೀಘ್ರದಲ್ಲೇ ಒಂದು ಪುಸ್ತಕ ಬರೆಯಲಿದ್ದೇನೆ. ಇನ್ ಶಾ ಅಲ್ಲಾಹ್)

ಕೊನೆಯದಾಗಿ, ಮೋಕ್ಷ ಲಭ್ಯವಾಗಲು ಈ ಸಂದೇಶವನ್ನು ಮತ್ತು ಸತ್ಯವಿಶ್ವಾಸವನ್ನು ನಾನು ಪ್ರಾಮಾಣಿಕವಾಗಿ ಮತ್ತು ಸತ್ಯಸಂಧವಾಗಿ ಸ್ವೀಕರಿಸಬೇಕು. ಆದರೆ ಇದು ಮಾತ್ರ ಸಾಲದು. ನಾವು ಎಲ್ಲ ಪ್ರವಾದಿಗಳ ಮೇಲೆ ವಿಶ್ವಾಸವಿಡಬೇಕು. ಪ್ರವಾದಿ ಮುಹಮ್ಮದ್ (ಅವರ ಮೇಲೆ

ಶಾಂತಿಯಿರಲಿ) ರವರಲ್ಲೂ ವಿಶ್ವಾಸವಿಡಬೇಕು. ಕಾರಣ ಅವರು ಕೂಡ ಒಬ್ಬ ಪ್ರವಾದಿ. ಪರಲೋಕ ಸೌಭಾಗ್ಯ ದೊರೆಯಲು ಇದಲ್ಲದೆ ಬೇರೆ ದಾರಿಯಿಲ್ಲ.

ಪರಲೋಕ ಮೋಕ್ಷವನ್ನು ಆಶಿಸಿ ನಿಷ್ಪಕ್ಷವಾಗಿ ಸತ್ಯವನ್ನು ಹುಡುಕುತ್ತಿರುವ ಜನರೇ, ಈ ವಿಷಯದ ಬಗ್ಗೆ ನೀವು ಚಿಂತಿಸಬೇಕಾದ ಸಮಯ ಬಂದಿದೆ. ಈಗಿಂದೀಗಲೇ ನೀವು ಇದರ ಬಗ್ಗೆ ಕಾರ್ಯಪ್ರವೃತ್ತರಾಗಬೇಕಾಗಿದೆ. ಕಾರಣ ಮರಣ ಯಾವಾಗ ಸಂಭವಿಸುತ್ತದೆಯೆಂದು ಯಾರಿಗೂ ತಿಳಿದಿಲ್ಲ.

ಈ ಪ್ರಮುಖ ವಿಷಯದ ಬಗ್ಗೆ ಸತ್ಯಾನ್ವೇಷಕ ಮನಸ್ಸಿನಿಂದ, ನಿಷ್ಪಕ್ಷವಾಗಿ ಚಿಂತಿಸಿದರೆ, ದೇವನು ಏಕೈಕನು, ಅವನಿಗೆ ಯಾವುದೇ ಸಹಭಾಗಿಗಳಿಲ್ಲ. ಅವನಿಗೆ ಮಕ್ಕಳಿಲ್ಲ ಎಂಬುದನ್ನು ನೀವು ಕಂಡುಕೊಳ್ಳುವಿರಿ. ಅವನು ಮಾತ್ರವೇ ಆರಾಧನೆಗೆ ಅರ್ಹನು ಎಂಬುದನ್ನು ನೀವು ಮನಗಾಣುವಿರಿ. ನೋಹ್, ಅಬ್ರಹಾಂ, ಮೋಶೆ, ಯೇಸು ಮೊದಲಾದವರಂತೆ ಮುಹಮ್ಮದ್ ಕೂಡ ಒಬ್ಬ ಪ್ರವಾದಿ ಮತ್ತು ಸಂದೇಶವಾಹಕ ಎಂದು ನೀವು ಅರಿತುಕೊಳ್ಳುವಿರಿ.

ಈಗ ನೀವಿಚ್ಛಿಸಿದರೆ ಈ ಸಾಕ್ಷಿವಚನವನ್ನು ಉಚ್ಛರಿಸಬಹುದು:

**ಅಶ್‌ಹದು ಅನ್ ಲಾಇಲಾಹ ಇಲ್ಲಲ್ಲಾಹು ವ ಅಶ್‌ಹದು ಅನ್ನ ಮುಹಮ್ಮದನ್ ರಸೂಲುಲ್ಲಾಹ್**

**(ಅರ್ಥ: ಅಲ್ಲಾಹನ ಹೊರತು ಅನ್ಯ ಸತ್ಯ ಆರಾಧ್ಯರಿಲ್ಲವೆಂದು ನಾನು ಸಾಕ್ಷಿ ನುಡಿಯುತ್ತೇನೆ ಮತ್ತು ಮುಹಮ್ಮದ್ ಅಲ್ಲಾಹನ ಸಂದೇಶವಾಹಕರೆಂದು ನಾನು ಸಾಕ್ಷಿ ನುಡಿಯುತ್ತೇನೆ).**

ಈ ಸಾಕ್ಷಿವಚನವು ಪರಲೋಕ ಸೌಭಾಗ್ಯಕ್ಕಿರುವ ಮೊಟ್ಟಮೊದಲ ಪ್ರಾಯೋಗಿಕ ಹೆಜ್ಜೆಯಾಗಿದೆ. ಇದು ಸ್ವರ್ಗದ ಬಾಗಿಲುಗಳ ಕೀಲಿಕೈಯಾಗಿದೆ.

ಈ ಹಾದಿಯಲ್ಲಿ ಚಲಿಸಲು ನೀವು ದೃಢನಿಶ್ಚಯ ಮಾಡಿಕೊಳ್ಳುವುದಾದರೆ, ನಿಮ್ಮ ಮುಸ್ಲಿಂ ಗೆಳೆಯರೊಂದಿಗೆ, ಮುಸ್ಲಿಂ ನೆರೆಯವರೊಂದಿಗೆ, ಮಸೀದಿಯಿಂದ, ಇಸ್ಲಾಂ ಸೆಂಟರ್‌ನಿಂದ, ಅಥವಾ ನೇರವಾಗಿ ನನಗೆ ಪತ್ರ ಬರೆದು ಸಹಾಯ ಕೇಳಿರಿ. (ತಮಗೆ ಸಹಾಯ ಮಾಡುವುದು ನನಗೆ ಬಹಳ ಸಂತೋಷದ ವಿಷಯ).

**"ಹೇಳಿರಿ: ಸ್ವತಃ ತಮ್ಮೊಂದಿಗೇ ಅತಿರೇಕವೆಸಗಿರುವ ಓ ನನ್ನ ದಾಸರೇ, ಅಲ್ಲಾಹನ ಕರುಣೆಯ ಬಗ್ಗೆ ನೀವು ನಿರಾಶರಾಗಬಾರದು. ಖಂಡಿತವಾಗಿಯೂ ಅಲ್ಲಾಹು ಎಲ್ಲ ಪಾಪಗಳನ್ನೂ ಕ್ಷಮಿಸುವನು. ಅವನು ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವನು. ಶಿಕ್ಷೆಯು ನಿಮಗೆ ಬರುವುದಕ್ಕಿಂತ ಮೊದಲೇ ನೀವು ಅಲ್ಲಾಹನ ಕಡೆಗೆ ಪಶ್ಚಾತ್ತಾಪ ಪಟ್ಟು ಮರಳಿರಿ ಮತ್ತು ಅವನಿಗೆ ಶರಣಾಗಿರಿ. ಇಲ್ಲದಿದ್ದರೆ ಆ ಬಳಿಕ ನಿಮಗೆ ಯಾವುದೇ ಸಹಾಯ ಸಿಗಲಾರದು. ನೀವು ಭಾವಿಸಿರದ ವಿಧದಲ್ಲಿ ಅನಿರೀಕ್ಷಿತವಾಗಿ ಶಿಕ್ಷೆಯು ನಿಮಗೆ ಬರುವುದಕ್ಕೆ ಮೊದಲೇ ನಿಮ್ಮ ಪ್ರಭುವಿನ ಕಡೆಯಿಂದ ನಿಮಗೆ ಅವತೀರ್ಣಗೊಂಡ ಅತ್ಯುತ್ತಮ ಸಂದೇಶಗಳನ್ನು ಅನುಸರಿಸಿರಿ."** [ಕುರ್‌ಆನ್ 39:53–55]

## ಇನ್ನೊಂದು ವಿಷಯ...

### ಕೊನೆಯ ಚಿಂತನೆ:

ಏಕೈಕ ಸಂದೇಶ ಎಂಬ ಈ ಪುಸ್ತಕವನ್ನು ಅಧ್ಯಯನಾತ್ಮಕ ದೃಷ್ಟಿಯಿಂದ ಏಕಾಗ್ರತೆಯೊಂದಿಗೆ ಓದಿದ ಬಳಿಕ ಕೆಲವು ಸತ್ಯಸಂಧರು ಕೇಳುವರು:

- ಇದು ಸತ್ಯವೇ?
- ಇದರಲ್ಲಿ ತಪ್ಪಿದೆಯೇ?

- ನಾವೇನು ಮಾಡಬೇಕು?

ನನ್ನ ಮುಂದಿನ ಕೃತಿಗಳಲ್ಲಿ ಇವುಗಳ ಬಗ್ಗೆ ನಾನು ವಿವರಿಸುವೆನು. ಇನ್ ಶಾ ಅಲ್ಲಾಹ್.

ಹೆಚ್ಚಿನ ಮಾಹಿತಿಗಾಗಿ, ಪ್ರಶ್ನೆ ಕೇಳುವುಕ್ಕಾಗಿ, ಸಲಹೆ ನೀಡುವುದಕ್ಕಾಗಿ ಲೇಖಕರ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಲು ಹಿಂಜರಿಯದಿರಿ:

**********

# ಒಳಪುಟಗಳಲ್ಲಿ



| م | العنوان | الصفحة |
|---|---|---|
| 1 | ಓದುವುದಕ್ಕೆ ಮುನ್ನ ಕೆಲವು ಪ್ರಶ್ನೆಗಳು | **2** |
| 2 | ಸಂದೇಶದ ಹಿನ್ನೆಲೆ | **3** |
| 3 | ಏಕೈಕ ಸತ್ಯದೇವ ಬೈಬಲ್ ಹಳೆಯ ಒಡಂಬಡಿಕೆಯಲ್ಲಿ | **11** |
| 4 | ಏಕೈಕ ಸತ್ಯದೇವ ಬೈಬಲ್ ಹೊಸ ಒಡಂಬಡಿಕೆಯಲ್ಲಿ | **12** |
| 5 | ಏಕೈಕ ಸತ್ಯದೇವ ಕುರ್‌ಆನ್‌ನಲ್ಲಿ | **13** |
| 6 | ಸಮಾಪ್ತಿ | **14** |

# ؟Are You Curious

If you are curious and interested in discovering more information about Islam, :please visit our website

www.discoveritsbeauty.com

Feel free to e-mail your questions or :feedback to

info@discoveritsbeauty.com